ನಾನೆಲ್ಲಾ ನೋಡ್ಕೆಂತೀನಿ ಅಂತ ಹೇಳು ಶೇಖ್ರುಗ' ಎಂದು ತುಂಬು ಹುರುಪಿನಲ್ಲಿ ಹುಡುಗಿಯ ಮೇಲೆ ಹಾರಿದ್ದರು ಹನುಮಂತಪ್ಪನವರು.

5

**ದಲಿತ ಕೂಟದ ಕೆಲಸದಮನೆ**

ಯಾವುದೇ ನ್ಯೂಸ್ ಚಾನೆಲ್ಲುಗಳವರು ಹಾಕದೇ ಕತ್ತರಿಸಿದ್ದ ಅದೇ ಹನುಮಂತಪ್ಪನವರ ಮಂಚದಾಟದ ನೋಡಿಯೊ ತುಣುಕೊಂದು ವಾಟ್ಸಾಪಿನಿಂದ ಎಲ್ಲರನ್ನೂ ಮುಟ್ಟಿತ್ತು. ಅದರಲ್ಲಿ ಹನುಮಂತಪ್ಪನವರು, 'ಮನ್ನೆ ಆ ಮಂದಿಯೆಲ್ಲಾ ಸರ್ಕ್ಯಂಡು ಬೆಂಗ್ಳೂರಾಗ ಎಂಥಾ ದೊಡ್ಡ ಮೆರವಣಿಗಿ ಮಾಡಿದ್ರು ಗೊತ್ತಾ? ಎಲ್ಲಿ ನೋಡಿದ್ರೂ ನೀಲಿ ಬಣ್ಣದ್ ಝಂಡಾ, ಜೈ ಭೀಮ್ ಹಾರಾಟ. ಪುಣ್ಯಕ್ಕ ಜಗ್ಗಿ ನ್ಯೂಸ್ ಪೇಪರ್ರು ಮತ್ತೆ ಜಗ್ಗಿ ಚಾನೆಲ್ಲುಗುಳು ನಮ್ಮೋರವೇ ಐದಾವ. ಅಲ್ಲಿ ಮ್ಯಾಲೆ ಕುಂತಿರೋರೂ ನಮ್ ಜನಾನೇ, ಇಲ್ಲಾ ನಮ್ ಪಕ್ಷದ್ ಜನಾನೇ, ಆಗಿದ್ದುಕ್ಕೇ ಅಷ್ಟ್ ದೊಡ್ಡ ಮೆರವಣಿಗಿದು ಸಣ್ಣ ಸುದ್ದಿನೂ ಆಗ್ಲಿಲ್ಲ. ಪಾಪ, ಫೇಸ್ಬುಕ್ಕು, ಯುಟ್ಯೂಬು, ವಾಟ್ಸಾಪು, ಟ್ವಿಟರ್ ಅನ್ಕಂಡು ವದ್ರಾಡಿ ಸುಮ್ನಾದ್ರು ಅವ್ರೆಲ್ಲಾ'ಎಂದು ನಕ್ಕಿದ್ದು. ತಮಗೆ ಬೇಕಾದ ಸುದ್ದಿಗಳನ್ನು ಮಾತ್ರ ಮಂದಿಗೆ ಮುಟ್ಟಿಸುವುದು ಸುದ್ದಿ ಧರ್ಮವೇ? ಎಂದು ಮೆರವಣಿಗೆಯಾಗಿದ್ದ ದಿನವೇ ಆಯ್ದ ಸುದ್ದಿಯವರನ್ನು ಬೈದಿದ್ದ ಕೂಟದ ಮುಂದಾಳು ನಲವತ್ತರ ಪ್ರಕಾಶನ ಸಿಟ್ಟು ಈಗ ಈ ನೋಡಿಯೊದಿಂದ ಇನ್ನೂ ಹೆಚ್ಚಾಯಿತು. ನಾಲ್ಕು ಹುಡುಗರ ಪಡೆಯನ್ನು ಅಣಿಮಾಡಿ, ಸಣ್ಣ ಕರಿ ಪೇಂಟಿನ ಡಬ್ಬಿಗಳನ್ನು ಕೊಂಡು, ಎಂ.ಎಲ್.ಎ ಉಳಿದುಕೊಂಡಿದ್ದ ಸರ್ಕಾರಿ ಪ್ರವಾಸಿ ಮಂದಿರದ ಕಡೆಗೆ ನುಗ್ಗಿದರು.

6

**ಅಡುಗೆ ಮನೆ, ನಮ್ಮೂರ ಸರ್ಕಾರಿ ಕಲಿಮನೆ (ಶಾಲೆ), ಕಲ್ಲೂರು, ಬಳ್ಳಾರಿ ಕಂಪಣ(ಜಿಲ್ಲೆ)**

ಕಲಿಮನೆಯಲ್ಲಿರುವ ಬರೀ ನಲವತ್ತು ಮಕ್ಕಳಿಗೆ, ಇಪ್ಪತ್ತು ಕಿಲೋಮೀಟರ್ ದೂರದ ತಾಲೂಕಿನಿಂದ ಊಟ ತಂದು ಕೊಡುವುದು ಕಲಿಕೆ(ಶಿಕ್ಷಣ) ಪಡೆಯವರಿಗೆ(ಇಲಾಖೆ) ಹೊರೆಯಾಗುತ್ತಿತ್ತು. ಅದಕ್ಕಾಗೇ ಇಬ್ಬರು ಹೆಂಗಸರನ್ನು ಇಟ್ಟು ಕಲಿಮನೆಯಲ್ಲೇ ಅಡುಗೆಯ ಏರ್ಪಾಟು ಮಾಡಲಾಗಿತ್ತು. ಇಲ್ಲಿ, 'ನಿನಿಗೇನ್ ಬುದ್ಧಿಗಿದ್ಧಿ ಐತಾ ಇಲ್ಲವಾ? ಎಷ್ಟು ಸಲಿ ಹೇಳಾದು, ನೀನ್ ಅಡ್ಗೀ ಮಾಡ್‌ಬ್ಯಾಡ ಅಂತ. ಸುಮ್ನೆ ಪಾತ್ರಿ ತೊಕ್ಕೊಟ್ಟು ಹೋಗು' ಎಂದು ಐವತ್ತೆಂಟರ್ ದ್ಯಾಮವ್ವ, ನಲವತ್ತರ ಹೆಡ್‌ಮಾಷ್ಟ್ರಿಂದ ಬೈಸಿಕೊಳ್ಳುತ್ತಿದ್ದಳು. ಮಾದಿಗರ ದ್ಯಾಮವ್ವ ಅಡುಗೆ ಮಾಡಿದರೆ ತಂದೆ-ತಾಯಿಗಳು ಮಕ್ಕಳನ್ನು ಕಲಿಮನೆಗೆ ಕಳಿಸುವುದಿಲ್ಲವಂತೆ ಎಂಬ ದೂಸರು(ಕಾರಣ) ಕೊಡುತ್ತಾರೆ ಹೆಡ್‌ಮಾಷ್ಟ್ರು. ಆದರೆ, ಮಕ್ಕಳೆಲ್ಲರೂ 'ಅಕಾ, ನೀನೇ ಅಡ್ಗಿ ಮಾಡಕಾ. ಚನಾಗ ಮಾಡ್ತೀ' ಎಂದು ಬೇಡುತ್ತವೆ. ತತ್ತಿ ತಿನ್ನುವವರು ತತ್ತಿ ತಿಂದು, ಬಾಳೆಹಣ್ಣು ತಿನ್ನುವವರು ಬಾಳೆಹಣ್ಣು ತಿಂದು ಉಳಿದ ನಾಲು ಹಸಿದುಕೊಂಡೇ ಉಳಿದುಬಿಡುತ್ತಿದ್ದವು. ದೊಡ್ಡ ಊರಿಗೆ ವರ್ಗವಾಗಿ ವಾರದಲ್ಲಿ ಹೆಡ್‌ಮಾಷ್ಟ್ರು ಬೇರೆ ಊರು ಬಿಟ್ಟರು. ಹೊಸ ಹೆಡ್‌ಮಾಷ್ಟ್ರು ಬರೋವರೆಗೆ ದ್ಯಾಮವ್ವನೇ ನಿರಾಳವಾಗಿ ಅಡುಗೆ ಮಾಡಿದಳು, ಮಕ್ಕಳು ತುಂಬು ನಲಿವಿನಲ್ಲಿದ್ದರು.

ಹೊಸ ಹೆಡ್‌ಮಾಷ್ಟ್ರಾಗಿ ಬಂದವನು ಚಂದ್ರಶೇಖರ್. ಅವನೂ ಹಳೆಯವರ ಮಾತೇ ತನಗೆ ಹೇಳಿದ್ದನ್ನು ಕೇಳಿಸಿಕೊಂಡು ಬಂದು ಮುಸುರೆ ತಿಕ್ಕುತ್ತಿದ್ದಾಗ, 'ತಿನ್ನೋರಿಗೇ ಇಲ್ಲದ್ ಚಿಂತಿ ನೋಡೋರಿಗ್ಯಾಕ? ಅವ್ರವ್ರ ಹೊಟ್ಟಿ ಅವ್ರವ್ರ ಇಷ್ಟ. ಇಂಥೋರಿಗೆಲ್ಲಾ ದೇವ್ರು ನಾಕ್ ಅಕ್ಷರ ಕೊಟ್ಟು ಅರಿವು ಕಿತ್ಗಂಬುಟ್ಟಾನ, ಪಾಪ' ಎಂದು ನಕ್ಕು ಏಳನೇ ತರಗತಿಯ ಕೆಲವು ಬುದ್ಧಿವಂತ ಮಕ್ಕಳಿಗೆ ದ್ಯಾಮವ್ವ ಹೇಳುತ್ತಿದ್ದಳು. ಈ ಮಾತು ಕೇಳುವಷ್ಟು ದೂರದಿಂದ ತರಗತಿಗೆ ಮರಳುತ್ತಿದ್ದ ಹೆಡ್‌ಮಾಷ್ಟ್ರು ಕಿವಿಗೆ ಬಿದ್ದು ಸಿಟ್ಟು ಬರಿಸಿತ್ತು.

ಮೇಲಧಿಕಾರಿಗಳಿಗೆ ಪತ್ರವನ್ನು ಬರೆದು, ವಯಸ್ಸು ಮತ್ತು ಆರೋಗ್ಯದ ದೂಸರು ಕೊಟ್ಟು ದ್ಯಾಮವ್ವಳನ್ನು ಕೆಲಸದಿಂದ ತೆಗೆಯಲು ಮಸಲತ್ತು ಮಾಡಿದರು ಚಂದ್ರಶೇಖರ್. ದ್ಯಾಮವ್ವ ಗಟ್ಟಿಗಿತ್ತಿ, ಪಕ್ಕದೂರಿನ ತಾಲೂಕಿನ ದಲಿತ ಕೂಟದ ಪ್ರಕಾಶಣ್ಣನನ್ನು ಮಾತಾಡಿಸಿ ಬಂದಳು. ಕೂಟದವರು ಮರುನಾಳೇ ಹೆಡ್‌ಮಾಷ್ಟ್ರನ್ನು ಮಾತಾಡಿಸಿ ದಾರಿಗೆ ತಂದರು.

7

**ಮದ್ದುಮನೆಯಲ್ಲಿ ದ್ಯಾಮವ್ವ**

ಮದ್ದುಮನೆಯ ಹತ್ತಾರು ಎಕರೆಗಳ ಅಂಗಳದಲ್ಲಿ ಬೇವಿನ ಮರವೊಂದರ ಕೆಳಗಿನ ಒಂಟಿ ಕಲ್ಲುಬಂಡೆಯ ಮೇಲೆ ಕೂತು, ದೂರದಲ್ಲಿ ತಮ್ಮವರು ಮೊದಲಿನಂತಾಗಿದ್ದಕ್ಕೆ ಮುಂಬಾಗಿಲಿನ ದೊಡ್ಡ ಕಬ್ಬಿಣದ